**ಓ ಎಸ್ ನಂಃ 267/2022** **ಪಿ ಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 19.02.2025 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ ಜಿ ಆರ್ ಹೆಚ್ ವಕೀಲರಿಂದ

ನನ್ನ ದಾವೆ ನಿಪಿ7(ಎ) ಮೇಲೆ ಆಧಾರಿತವಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ7 ರ ಮೇಲೆ ಸಹ ಆಧಾರವಾಗಿದೆ ಎಂದು ನುಡಿಯುತ್ತಾರೆ. ನಿಪಿ7 ರಂತೆ ಆಸ್ತಿಯನ್ನು ಭರಮಪ್ಪನ ಮಗ ಬಸಪ್ಪ ಖರೀದಿ ಮಾಡಿದ್ದಾನೆ ಎಂದರೆ ಸಾಕ್ಷಿಯು ಭರಮಪ್ಪ ಖರೀದಿ ಮಾಡಿದ್ದಾನೆ ಎಂದು ನುಡಿಯುತ್ತಾರೆ. ಭರಮಪ್ಪ ನನ್ನ ದೊಡ್ಡಪ್ಪ. ಭರಮಪ್ಪ, ರಾಮಪ್ಪ, ಚನ್ನಪ್ಪ ಮತ್ತು ಗುಳಪ್ಪ 4 ಜನ ಅಣ್ಣತಮ್ಮಂದಿರು ಎಂದರೆ ಸರಿ. ಸಾಕ್ಷಿ ಮುಂದುವರೆದು ತಲಾ 2 ಗುಂಟೆ ಜಮೀನನ್ನು ಗುಳಪ್ಪ ಮತ್ತು ಚನ್ನಪ್ಪನಿಗೆ ಭರಮಪ್ಪ ಬಿಟ್ಟು ಕೊಟ್ಟಿದ್ದಾನೆ ಎಂದು ನುಡಿಯುತ್ತಾರೆ. ರಾಮಪ್ಪನ ಮಕ್ಕಳು ಮತ್ತು ಭರಮಪ್ಪನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ತಲಾ 2 ಗುಂಟೆ ಜಮೀನನ್ನು ಗುಳಪ್ಪ ಮತ್ತು ಚನ್ನಪ್ಪನಿಗೆ ಭರಮಪ್ಪರವರು ಬಿಟ್ಟು ಕೊಟ್ಟಿರುವುದರಿಂದ ಮಾಡಿಲ್ಲ ಎಂದು ನುಡಿಯುತ್ತಾರೆ. ತಲಾ 2 ಗುಂಟೆ ಜಮೀನನ್ನು ಬಿಟ್ಟು ಕೊಟ್ಟಿರುವುದನ್ನು ತೋರಿಸಲು ವಾಟ್ನಿ ಪತ್ರವನ್ನು ಹಾಜರುಪಡಿಸಿದ್ದೇನೆ. ನಿಪಿ7(ಎ) ನೋಂದಣಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ7(ಎ) ನ ಮೊದಲನೇ ಪುಟವನ್ನು ನಾನೇ ನೀರು ಹಾಕಿ ಹಾಳು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ7(ಎ)ನಲ್ಲಿ ಅಳಸಿ ಹೋದಂತಹ ಅಕ್ಷರಗಳ ವಿಚಾರಗಳನ್ನು ನನಗೆ ಹೇಳಲು ಬರುತ್ತದೆ ಎಂದರೆ ಸಾಕ್ಷಿಯು ವಾಟ್ನಿ ಬಗ್ಗೆ ವಿವರಣೆ ಇದೆ ಎಂದು ನುಡಿಯುತ್ತಾರೆ. ನಿಪಿ7(ಎ)ನಲ್ಲಿ ಚಕಬಂದಿ ಬರೆದಿದೆ. ನಿಪಿ7(ಎ) ಖೊಟ್ಟಿ ಕಾಗದ ಪತ್ರ ಎಂದರೆ ಸರಿಯಲ್ಲ. ನಿಪಿ7(ಎ) ನಲ್ಲಿ ಆಸ್ತಿ ನಂಬರನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ7(ಎ) ನಲ್ಲಿ 1 ನೇ ಪ್ರತಿವಾದಿ ಮತ್ತು ಆತನ ತಂದೆಯ ಸಹಿಗಳು ಇಲ್ಲ ಎಂದರೆ ಸರಿಯಲ್ಲ. ನಿಪಿ7(ಎ) ನಲ್ಲಿ ನನ್ನ ತಂದೆಯ ಸಹಿ ಇಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುವ ಚಕಬಂದಿ ನಾನು ಬರೆದಿಲ್ಲ. ನಿಪಿ7(ಎ)ರಲ್ಲಿ ಚಕಬಂದಿ ನಮೂದು ಮಾಡಲಾಗಿದೆ. ನಿಪಿ7(ಎ)ನಲ್ಲಿನ ಸಾಕ್ಷಿದಾರರು ಮರಣ ಹೊಂದಿರುತ್ತಾರೆ. ನಿಪಿ7(ಎ) ರಂತೆ 3 ಜನರಿಗೆ ಹಿಸ್ಸೆಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಇಬ್ಬರಿಗೆ ಆಗಿದೆ ಎಂದು ನುಡಿಯುತ್ತಾರೆ. ನಿಪಿ7(ಎ)ರಲ್ಲಿರುವ ಹೆಬ್ಬಟ್ಟಿನ ಗುರುತು ಖೊಟ್ಟಿ ಎಂದರೆ ಸರಿಯಲ್ಲ. ನನ್ನ

ವಯಸ್ಸು 58. ಕೃಷಿ ಜಮೀನುಗಳ ಬಗ್ಗೆ ನಿಪಿ7(ಎ)ರಲ್ಲಿ ವಾಟ್ನಿಯಾಗಿಲ್ಲ. ನಿಪಿ7(ಎ) ರಲ್ಲಿ 2 ನೇ ಪುಟದ ಮೇಲ್ಭಾಗದಲ್ಲಿ ನಮೂದು ಇರುವ ಚನ್ನಪ್ಪ ಮತ್ತು ನಾಗಪ್ಪ ರವರು ನನ್ನ ಸಣ್ಣ ಅಜ್ಜನ ಮಕ್ಕಳು. ನಿಪಿ7(ಎ)ಕ್ಕೆ ಚನ್ನಪ್ಪ ಮತ್ತು ನಾಗಪ್ಪ ರವರು ಸಹಿ ಮಾಡಿದ್ದಾರೆ. ನಿಪಿ7(ಎ) ರಲ್ಲಿ ಅವರು ಎಲ್ಲಿ ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. 1990 ರ ಹಿಂದೆಯೇ ನಾಲ್ಕು ಡೈರಿ ನಮೂದು ಸಂಖ್ಯೆಗಳ ಮೂಲಕ ಮನೆ ವ ಹಿತ್ತಲ ಮತ್ತು ಕೃಷಿ ಜಮೀನುಗಳನ್ನು ಭರಮಪ್ಪ, ರಾಮಪ್ಪ, ಚನ್ನಪ್ಪ ಮತ್ತು ಗುಳಪ್ಪ ರವರು ವಾಟ್ನಿ ಮಾಡಿಕೊಂಡು ಪ್ರತ್ಯೇಕವಾಗಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಚನ್ನಪ್ಪ ಮತ್ತು ಗುಳಪ್ಪ ರವರಿಗೆ ಭರಮಪ್ಪರವರು ಆಸ್ತಿಯನ್ನು ಬಿಟ್ಟು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಪಿ7(ಎ)ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**